ಮಾಡಿದರು ಎಂದು ಸರ್ಕಾರಕ್ಕೆ ದೂರು ಕೊಟ್ಟವರಾರು ?

ಶ್ರೀ ಟಿ. ಚನ್ನಯ್ಯ.—ಶ್ರೀ ಬಸವರಾಜ್ ಮತ್ತು ವಿಶ್ವನಾಥ್ ಎಂಬವರು.

ಶ್ರೀ ಎಸ್. ಗೋಪಾಲಗೌಡ.—ಇಬ್ಬರೂ ಸೇರಿ ಕೊಟ್ಟಿದ್ದಾರೆಯೆ ದೂರನ್ನು ?

ಶ್ರೀ ಟಿ. ಚನ್ನಯ್ಯ.—ಬೇರೆ ಬೇರೆ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಬೇರೆ ಬೇರೆ ಅರ್ಜಿಗಳನ್ನು ಬರೆದಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಬಸವರಾಜ್ ಎಂಬವರು ಸರ್ಕಾರಕ್ಕೆ ದೂರು ಕೊಟ್ಟಿದ್ದಾರೆ, ವಿಶ್ವನಾಥ್ ಎಂಬವರು ಡೆಪ್ಯುಟಿಕಮೀಷನರಿಗೆ ದೂರು ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಅವರಿಬ್ಬರೂ ಕೌನ್ಸಿಲ್‌ಗೆ ಆರಿಸಿ ಬಂದಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಅವರು ಯಾವ ಪಕ್ಷಕ್ಕೆ ಸೇರಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

Mr. SPEAKER.—He cannot say that.

ಶ್ರೀ ಎಸ್. ಗೋಪಾಲಗೌಡ.—ಅವರಿಬ್ಬರನ್ನೂ ಕೌನ್ಸಿಲಿನಿಂದ ತೆಗೆದುಹಾಕಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಒಂದು ತೀರ್ಮಾನವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಬೇರೆ dispute ಇದೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ತೆಗೆದು ಹಾಕಿದಮೇಲೆ ತಾನೆ ಅವರು ದೂರು ಕೊಟ್ಟಿರುವುದು ?

ಶ್ರೀ ಟಿ. ಚನ್ನಯ್ಯ.—ಇನ್ನೂ ಮುಂಚೆಯೇ ದೂರು ಕೊಟ್ಟಿದ್ದರು.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಪೌರ ಸಭೆಯಲ್ಲಿ ತಪ್ಪು ನಡೆದುಕೊಂಡಿದ್ದಾರೆಂದು ಚರ್ಚೆ ನಡೆದು ನಿರ್ಣಯಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ನಿರ್ಣಯ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಇಂಥ ನಿರ್ಣಯಗಳನ್ನು ಪಾನು ಮಾಡಿದ್ದಾರೆಯೆ ? ಪೌರ ಸಭಾಧ್ಯಕ್ಷರ ಮೇಲೆ ಲಂಚದ ಆಪಾದನೆ ಮಾಡಿ ಮತ್ತು ಪೌರ ನಧೆಯ ಹಣವನ್ನು ದುರುಪಯೋಗಪಡಿಸಿದ್ದಾರೆಂದು ನಿರ್ಣಯವನ್ನು ಪಾನು ಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ನಿರ್ಣಯ ಮಾಡಿಲ್ಲ, ಆದರೆ ಸರಬರಾಜು ಮಾಡತಕ್ಕ materials ವಿಷಯದಲ್ಲಿ ಅನುಮಾನ ಬಂದು ಚರ್ಚೆ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ, ಸಿದ್ದಪ್ಪನವರು ತಮ್ಮ ಪಾರ್ಟಿಗೆ ವಿರೋಧವಾಗಿದ್ದಾರೆಂದು ತಾನೆ ಈ ರೀತಿ ದೂರುಮಾಡಿರುವುದು ?

ಶ್ರೀ ಟಿ. ಚನ್ನಯ್ಯ.—ಅಭಿಪ್ರಾಯದ ಮಾತು.

ಶ್ರೀ ಜಿ. ದುಗ್ಗಪ್ಪ.—ದೂರು ಕೊಟ್ಟಿರುವ ಸದಸ್ಯರು ಹಿಂದೆ ತಾವು ಸದಸ್ಯರಾಗಿರಬೇಕಾದರೆ, ರಾಜೀನಾಮೆ ಕೊಟ್ಟಿದ್ದಾರೆಯೆ ?

Mr. SPEAKER.—That does not arise. If it is a matter which requires investigation, they will do it.

ಶ್ರೀ ಜಿ. ದುಗ್ಗಪ್ಪ.—ದೂರು ಕೊಟ್ಟಿರುವವರು ಹಿಂದೆ ತಮ್ಮ ಕೌನ್ಸಿಲರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರೆ ?

ಶ್ರೀ ಟಿ. ಚನ್ನಯ್ಯ.—ಕೌನ್ಸಿಲ್‌ಗೆ ರಾಜೀನಾಮೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಅದು disputeನಲ್ಲಿದೆ.

ಶ್ರೀ ಜಿ. ದುಗ್ಗಪ್ಪ.—ರಾಜೀನಾಮೆ ಅಂಗೀಕಾರವಾದ ಮೇಲೆ ದೂರು ಕೊಟ್ಟಿರುವರೆ ?

ಶ್ರೀ ಟಿ. ಚನ್ನಯ್ಯ.—ಮುಂಚಿತವಾಗಿ ಕೊಟ್ಟಿದ್ದಾರೆ.

Mr. SPEAKER.—I think we should go to the next question. For such a small question I do not think that we should take up so much time.

ಶ್ರೀ ಬಿ. ಹುಚ್ಚೇಗೌಡ.—ಅವರು ಅಧ್ಯಕ್ಷರಾದ ಮೇಲೆ ಮುನಿಸಿಪಲ್ ತೆರಿಗೆ ವಗ್ಗೆರೆಯ ವನೂಲೆ ಕಟ್ಟುನಿಟ್ಟಾಗಿ ಮಾಡಿದುದಕ್ಕಾಗಿ ಅಲ್ಲಿನ ವರ್ತಕರು ಸೇರಿ ದೂರು ಕೊಟ್ಟಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

Sri G. SIVAPPA.—Is it not a fact that there are two rival groups in the Municipal Council ?

Sri T. CHANNIAH.—Yes, there are.

Sri J. MOHAMED IMAM.—I rise to a point of order, Sir. I think the matter is *sub judice*.

Mr. SPEAKER.—I do not think it is so. It is only under investigation.

Sri J. MOHAMED IMAM.—No, Sir, this matter is before the High Court.

Mr. SPEAKER.—I am sorry, I did not know. Then I do not allow any questions to be put.

Estimates Committee Report.

Q.—49. Sri B. NARAYANASWAMY (Mysore South).—

Will the Government be pleased to state :—

the action taken on the report of the Estimates Committee placed before the House during the last Sessions ?

A.—Sri Kadidal MANJAPPA (Minister for Revenue and Public Works).—

It is under examination in consultation with the Chief Engineer.

Sri B. NARAYANASWAMY.—I have no supplementaries.

Foot bridge across the Cauvery near Sivasamudram.

Q.—130. Sri B. P. NAGARAJAMURTHY (Malavalli).—

Will the Government be pleased to state :—